**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**
**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಮಾರ್ಚ್ / ಏಪ್ರಿಲ್, 2014**
**S.S.L.C. EXAMINATION, MARCH / APRIL, 2014**

# ಮಾದರಿ ಉತ್ತರಗಳು
# MODEL ANSWERS

ದಿನಾಂಕ : 28. 03. 2014 — ಸಂಕೇತ ಸಂಖ್ಯೆ : **01-K**

Date : 28. 03. 2014 — CODE NO. : **01-K**

## ವಿಷಯ : ಪ್ರಥಮ ಭಾಷೆ — ಕನ್ನಡ
## Subject : FIRST LANGUAGE — KANNADA

[ ಪರಮಾವಧಿ ಅಂಕಗಳು : 125
[ Max. Marks : 125

| ಪ್ರಶ್ನೆ ಸಂಖ್ಯೆ | ಉತ್ತರದ ಕ್ರಮಾಕ್ಷರ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|---|
| | | ಬಹು–ಆಯ್ಕೆಯ ಪ್ರಶ್ನೆ ಸಂಖ್ಯೆ 1 ರಿಂದ 15 ರವರೆಗಿನ ಪ್ರತಿ ಸರಿಯುತ್ತರಕ್ಕೆ ಒಂದು ಅಂಕ : | 15 × 1 = 15 |
| 1. | (ಬಿ) | ನಮನ | |
| 2. | (ಸಿ) | ವಿದ್ಯಾರ್ಥಿ | |
| 3. | (ಡಿ) | ತಾನು | |
| 4. | (ಎ) | ವಿಧ್ಯರ್ಥಕ | |
| 5. | (ಬಿ) | ದ್ವಿತೀಯ | |
| 6. | (ಸಿ) | ಆದೇಶ | |
| 7. | (ಬಿ) | ಆಪದ್ಬಂದು | |
| 8. | (ಡಿ) | ಆದುದರಿಂದ | |
| 9. | (ಬಿ) | ಉಪಕಾರ | |
| 10. | (ಎ) | ತತ್ಪುರುಷ | |
| 11. | (ಡಿ) | ಪ್ರಶ್ನಾರ್ಥಕ | |
| 12. | (ಎ) | ಸಾಮಾನ್ಯ ವಾಕ್ಯ | |
| 13. | (ಡಿ) | ಸಿಂಹ | |
| 14. | (ಸಿ) | ಇರಲು | |
| 15. | (ಎ) | ತದ್ಧಿತಾಂತ ನಾಮ | |

[ Turn over

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 16. | ಹೊಂದಿಸಿ ಬರೆಯುವುದು. (ಪ್ರತಿ ಸರಿಯುತ್ತರಕ್ಕೆ ಒಂದು ಅಂಕ)<br>i) ಋ) ಮಚ್ಚರ<br>ii) ಊ) ಮುಸಾಫರ್<br>iii) ಉ) ಧಗಧಗ<br>iv) ಆ) ಹೊಚ್ಚ ಹೊಸ<br>v) ಅ) ಬೆನಕನ ಮದುವೆ | 5 × 1 = 5 |
| | ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬುವುದು. (ಪ್ರತಿ ಸರಿಯುತ್ತರಕ್ಕೆ ಒಂದು ಅಂಕ) | 5 × 1 = 5 |
| 17. | ಗ್ರಾಮಸ್ಥರು | |
| 18. | ದೃಢನಿಷ್ಠೆ | |
| 19. | ವಿಷ್ಣುದಾಸ | |
| 20. | ಸ್ವರ್ಗವೆ | |
| 21. | ನಂದನದೊಳ್ | |
| | ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ. (ಪ್ರತಿ ಸರಿಯುತ್ತರಕ್ಕೆ ಒಂದು ಅಂಕ) | 10 × 1 = 10 |
| 22. | ಸುಪ್ರಸಿದ್ಧ ನಾಟಕಕಾರ ಶೆರಿಡನ್ ಬ್ರಿಟಿಷ್ ಪಾರ್ಲಿಮೆಂಟಿನ ಸದಸ್ಯನಾಗಿದ್ದನು. | |
| 23. | ಅಂಗುಲೀಮಾಲನು 'ಮಂತ್ರ ವಿದ್ಯೆಯನರಿತ ಮಾಟಗಾರನೊ ನೀನು' ಎಂದು ಬುದ್ಧನಿಗೆ ಹೇಳುತ್ತಾನೆ. | |
| 24. | 'ಎರಡನೆಯ ಮದುವೆಯನ್ನು ಮಾಡಿಕೊಳ್ಳುವುದಿಲ್ಲ' ಎಂಬುದು ವೆಂಕಣ್ಣ ಮೇಷ್ಟ್ರು ಮಾಡಿದ ದೃಢ ಸಂಕಲ್ಪ. | |
| 25. | ಶಕ್ತಿಯ ಬಗೆಗೆ ಪುರಂದರದಾಸರು 'ಶಕ್ತನಾದರೆ ನೆಂಟರೆಲ್ಲ ಹಿತರು, ಅಶಕ್ತನಾದರೆ ಆಪ್ತಜನರೇ ವೈರಿಗಳು' ಎಂದು ಹೇಳಿದ್ದಾರೆ. | |
| 26. | ಭಾರತೀಯ ಸೇನಾ ವ್ಯವಸ್ಥೆಯ ಮಹಾದಂಡನಾಯಕರಾಗಿ ರಾಷ್ಟ್ರಪತಿಗಳು ಕಾರ್ಯನಿರ್ವಹಿಸುತ್ತಾರೆ. | |
| 27. | ಜನಪದರು ಬೆಳಗಾಗಿ ಎದ್ದು ಎಳ್ಳುಜೀರಿಗೆಯನ್ನು ಬೆಳೆಯುವ ಭೂಮಿತಾಯಿಯನ್ನು ನೆನೆಯುತ್ತಾರೆ. | |
| 28. | ಮಾರರಿಪು ಹುಟ್ಟಿನ ಕೊನೆ ಸನ್ನೆ ಮಾಡುವುದರಿಂದ ಅರ್ಜುನನ ಶೌರ್ಯವನ್ನು ಅಗಜಾತೆಗೆ (ಪಾರ್ವತಿಗೆ) ತೋರಿಸಿದನು. | |
| 29. | ಶಿವ ಅರ್ಜುನನನ್ನು ಪರೀಕ್ಷಿಸಲು ಬೇಡನ (ಶಬರನ) ವೇಷದಲ್ಲಿ ಬಂದನು. | |
| 30. | ದುರ್ಯೋಧನನು ಭೀಮನಿಗೆ ಮೂರನೆಯ ಹೊಡೆತವನ್ನು ತನ್ನ ತಮ್ಮನಾದ ದುಶ್ಶಾಸನನನ್ನು ಕೊಂದ ಕಾರಣಕ್ಕಾಗಿ ಹೊಡೆದನು. | |
| 31. | 'ಕನ್ನಡನಾಡು' ಕಾವೇರಿ ನದಿಯಿಂದ ಗೋದಾವರಿ ನದಿಯವರೆಗೆ ಹಬ್ಬಿತ್ತು ಎಂದು ಕವಿರಾಜ ಮಾರ್ಗಕಾರ ಹೇಳಿದ್ದಾನೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು. | $15 \times 2 = 30$ |
| 32. | ವ್ಯಾವಹಾರಿಕವೆಂದರೆ ಜೀವದ್ಭಾಷೆ. ಜನರು ಅದರಲ್ಲಿ ಮಾತನಾಡುತ್ತಾರೆ, ವ್ಯವಹರಿಸುತ್ತಾರೆ. ಗ್ರಾಂಥಿಕವೆಂದರೆ ಅಭಿವೃದ್ಧಿ ಹೊಂದಿ ಗ್ರಂಥ ರಚನೆಯಲ್ಲಿ ಉಪಯೋಗವಾದ ಭಾಷೆ. ಎಲ್ಲಾ ವ್ಯಾವಹಾರಿಕ ಭಾಷೆಗಳು ಗ್ರಾಂಥಿಕವಾಗಬೇಕಿಲ್ಲ. ಹಾಗೆಯೇ ಎಲ್ಲಾ ಗ್ರಾಂಥಿಕ ಭಾಷೆಗಳು ಇಂದು ವ್ಯಾವಹಾರಿಕವಾಗಿ ಇರುವುದಿಲ್ಲ. | |
| 33. | ಆಂಗ್ಲ ಭಾಷಾ ಪಂಡಿತರು ದೇಶ–ವಿದೇಶಗಳ ಭಾಷೆ ಹಾಗೂ ಸಾಹಿತ್ಯ ಸಂಸ್ಕೃತಿಯನ್ನು ಮುಕ್ತ ಮನಸ್ಸಿನಿಂದ ಅಭ್ಯಸಿಸಿದರು. ಮಹಾಮೇಧಾವಿಗಳು ತಮ್ಮ ಆಸೆ, ಆಕಾಂಕ್ಷೆ, ವಿಚಾರ ಮುಂತಾದುವನ್ನು ಆಂಗ್ಲ ಭಾಷೆಯ ಮುಖಾಂತರವಾಗಿಯೇ ಹೇಳಬೇಕೆಂಬ ಉಜ್ವಲ ಅಭಿಮಾನವುಳ್ಳವರಾಗಿದ್ದರು. ಆಂಗ್ಲ ವಿಜ್ಞಾನಿಗಳು, ರಾಜಕಾರಣಿಗಳು, ಅರ್ಥಶಾಸ್ತ್ರಜ್ಞರು ಹೀಗೆ ಎಲ್ಲರೂ ತಮ್ಮ ಭಾಷೆಯನ್ನೇ ಬಳಸಿದುದರ ಪರಿಣಾಮವಾಗಿ ಆಂಗ್ಲ ಭಾಷೆ ಬೆಳೆದು ವಿಶ್ವವ್ಯಾಪಿಯಾಯಿತು. | |
| 34. | ಮುಗುಳುನಗೆ, ಮೆಲುನಗೆ, ನಸುನಗೆ, ಎಳೆನಗೆ, ತಣ್ಣಗೆ, ಬಿಸುನಗೆ, ಹುಸಿನಗೆ, ಹುಚ್ಚುನಗೆ, ಗಹಗಹಿಸುವನಗೆ, ಕೊಂಕುನಗೆ, ರಸನಗೆ ಇವು ನಗೆಯ ಅನಂತ ಕೊಂಡಿಗಳು. ನವಿರು ನವಿರಾಗಿ ಹೊರಬರುವ ನಗೆಯ ಪದರು ಅಗಣಿತ, ಅನಂತ. | |
| 35. | ಮನದಲ್ಲಿ ಭಾವಗಳು ಮೂಡಿನಿಂತಾಗ ನಗು–ಅಳು ಜನಿಸುತ್ತವೆ. ಚಿತ್ತ ವೃತ್ತಿಯಲ್ಲಿ ಹಾಸ್ಯಭಾವ ಮೂಡಿದರೆ ನಗು; ಕ್ಲೇಶಭಾವ ಮೂಡಿದರೆ ಅಳು. ಅಳುವಿನಿಂದ ನಗೆ; ನಗೆಯಿಂದ ಅಳು ಹುಟ್ಟಲಾರವು. ಅವೆರಡೂ ಪರಸ್ಪರ ವಿರುದ್ಧವಾದುವು. | |
| 36. | ಹಿಂದಿನ ದಿನ ತನ್ನ ತೋಟದ ಮರದಲ್ಲಿ ಎಳನೀರನ್ನು ಕಿತ್ತು, ತನ್ನ ಹೆಂಡತಿಯನ್ನು ಹೊಡೆಯಲು ಬಂದಿದ್ದ ರಾಚಪ್ಪನನ್ನು ಸಿದ್ದಪ್ಪನು ಪ್ರಶ್ನಿಸಿದ ಸಂದರ್ಭದಲ್ಲಿ ಮಾತಿಗೆ ಮಾತು ಬೆಳೆಯಿತು. ಸಿದ್ದಪ್ಪನು ರಾಚಪ್ಪನಿಗೆ ನಾಲ್ಕು ಗುದ್ದುಕೊಟ್ಟು ಹಿಂದಕ್ಕೆ ನೂಕಿದನು. ಇದರಿಂದ ಕೋಪಗೊಂಡ ರಾಚಪ್ಪನು ಕೊಸರಿಕೊಂಡು ಮೇಲೆದ್ದು ಕೂಡಲಿ ಎತ್ತಿಕೊಂಡು ಹಲ್ಲನ್ನು ಕಡಿಯುತ ನುಗ್ಗಿಬಂದು ಸಿದ್ದಪ್ಪನಿಗೆ ಹೊಡೆಯಲು ಹೋದನು. | |
| 37. | ''ನನಗೆ ನಿನಗೆ ಪ್ರಾಣಕೊಟ್ಟ ದೇವತೆ ಕಣೋ ಕೆಂಪ. ಇಲ್ಲಿಯವರೆಗೂ ನಮ್ಮ ಸಲುವಾಗಿ ದುಡ್ದೂ ದುಡ್ದೂ ತನ್ನ ಪ್ರಾಣತೇದು ನಮ್ಮನ್ನು ಬದುಕಿಸಿದ್ದಾಳೆ ಕಣೋ. ಈ ಪುಣ್ಯವಂತೆ. ಅದೃಷ್ಟ ಚೆಂದಾಗಿದ್ದರೆ ಇವಳನ್ನು ಹೊಲದಲ್ಲಿ ಹೂಣಿಸಿ ಮೇಲೊಂದು ಮಂಟಪ ಕಟ್ಟಿಸಬೇಕು ಅಂದುಕೊಂಡಿದ್ದೆ. ಈಗ ಇವಳು ಸಾಯುವ ಕಾಲದಲ್ಲಿ ಕಟುಕನಿಗೆ ಮಾರಿ, ಆ ಅನ್ನ ತಿಂದರೆ ನಮ್ಮ ಬಾಯಿಯಲ್ಲಿ ಹುಳ ಬೀಳುವುದಿಲ್ಲವೇ'' ಎಂದು ಸಿದ್ದಪ್ಪನು ಕೋಪದಲ್ಲಿ ಅಬ್ಬರಿಸಿದನು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 38. | ಹೆಡ್ ಮೇಷ್ಟ್ರು ವೆಂಕಟಸುಬ್ಬಯ್ಯನವರು ತಿಪ್ಪೇನ ಹಳ್ಳಿಯ ವೆಂಕಣ್ಣ ಮೇಷ್ಟ್ರ ಹೆಂಡತಿ ಸತ್ತ ವರ್ತಮಾನವನ್ನು ತಿಳಿದು, ಐವತ್ತು ರೂಪಾಯಿಗಳನ್ನು ಗಂಟುಕಟ್ಟಿಕೊಂಡು ಬಂದು, ದಹನ ಕ್ರಿಯೆಗಳನ್ನು ನಡೆಸಿಕೊಟ್ಟರು. ವೆಂಕಟಣ ಮೇಷ್ಟ್ರಿಗೆ ಖರ್ಚಿಗೆ ಹಣಕೊಟ್ಟು ಧೈರ್ಯ ಹೇಳಿದರು. ಗ್ರಾಮಸ್ಥರು ವೆಂಕಣ್ಣ ಮೇಷ್ಟ್ರನ್ನು ಊರೊಳಗೆ ಬರದಂತೆ ತಡೆದಾಗ ಮೇಷ್ಟ್ರಿಗೆ ತೊಂದರೆ ಕೊಡದಂತೆ ಊರಿನವರಿಗೆ ವಿವೇಕ ಹೇಳಿದರು. | |
| 39. | ಪುರಾಣ ಕೂಪದ ಸ್ವಚ್ಛಜಲದಲ್ಲಿ ತನ್ನ ಪ್ರತಿಬಿಂಬವನ್ನು ಕಂಡು ಉತ್ಸಾಹದಿಂದ ಮೊಲವು ''ಸಿಂಹವನ್ನು ಕೊಲ್ಲಲು, ಗೆಲ್ಲಲು ಈ ಬಾವಿಯೇ ಸಾಕು. ಆ ಸಿಂಹವನ್ನು ಇಲ್ಲಿಗೆ ಕರೆತಂದು ಕೊಲ್ಲುವೆನು. ''ಸಾವಂಗೆ ಸಮುದ್ರಂ ಮೊಳಕಾಲುದ್ದಂ'' ಎನ್ನುವಂತೆ ಅಥವಾ ''ಕಿರ್ಚಿನೊಳ್ ಬಿಳ್ದಂಗೆ ಸಾವು ತಪ್ಪದು'' ಎಂಬಂತೆ ಬದುಕಲುಬಹುದು, ಸಾಯಲುಬಹುದು. ಕೊಲ್ಲಲಾರದೆ ಹೋದರೆ ಅವನು ಮುನಿದು ಎರಡು ಬಾರಿ ಕೊಲ್ಲುವನೋ ಇಲ್ಲ. ಭಯಪಡುವಂತಹುದು ಏನೂ ಇಲ್ಲ ಎಂದು ಹೇಳಿತು. | |
| 40. | ನರನು ಸರ್ವಜ್ಞನಾಗಲು ''ಕೆಲವನ್ನು ಬಲ್ಲವರಿಂದ ಕಲಿಯಬೇಕು. ಕೆಲವನ್ನು ಶಾಸ್ತ್ರಗಳನ್ನು ಕೇಳಿ ಕಲಿಯಬೇಕು. ಕೆಲವನ್ನು ಕಾರ್ಯ ಮಾಡುವವರನ್ನು ನೋಡಿ ಕಲಿಯಬೇಕು. ಕೆಲವನ್ನು ಸುಜ್ಞಾನದಿಂದ ನೋಡಿ ಕಲಿಯಬೇಕು. ಕೆಲವನ್ನು ಸಜ್ಜನರ ಸಂಗದಿಂದ ಕಲಿಯಬೇಕು''. ಎಂದು ಪುಲಿಗೆರೆ ಸೋಮನಾಥನು ಹೇಳಿದ್ದಾನೆ. | |
| 41. | ''ಲೋಕದ ಜನರು ಮಾಡುವ ವಿಕೃತ ಕಾರ್ಯಗಳನ್ನು ನೋಡಿ ಮನದಲ್ಲಿಯೇ ನಗಬೇಕು. ಶ್ರಮಪಟ್ಟು ದುಡಿಯುವಾಗ ಹಾಗೂ ನೋವುಗಳನ್ನು ಅನುಭವಿಸುವಾಗ ತುಟಿಯನ್ನು ಬಿಗಿಹಿಡಿದು ಮೌನವಾಗಿರಬೇಕು. ವಿಶ್ವಜೀವನದ ಸಾಮರಸ್ಯದಲ್ಲಿ ಬೆರೆತು ಬಾಳ ಪಯಣವನ್ನು ಸಾಗಿಸಬೇಕು. ಸಂಸಾರದಲ್ಲಿ ನಗುನಗುತ ಬಾಳಿ, ಕಾಲನ ಕರೆ ಬಂದಾಗ ನಗುನಗುತ ತೆರಳಬೇಕು'' ಎಂದು ಡಿ.ವಿ. ಗುಂಡಪ್ಪ ಅವರು ಹೇಳಿದ್ದಾರೆ. | |
| 42. | ಆಕಾಶದಲ್ಲಿ ಸಮಾನವಾದುದು ಸರೋವರ. ಲೋಕಕ್ಕೆ ಹಿತವನ್ನು ಉಂಟುಮಾಡುವವನು ದೇವೇಂದ್ರ (ಶಕ್ರ). ಮಾನವರಿಗೆ ಮಾತೆಯ ಸ್ವರೂಪವಾದುದು ಗೋವು. ಶ್ರೇಷ್ಠವಾದ ಸತ್ಯವು ಸೂರ್ಯನಿಗೆ ಸಮಾನವಾದುದು ಎಂದು ಧರ್ಮಜನು ಯಕ್ಷನಿಗೆ ಹೇಳುತ್ತಾನೆ. | |
| 43. | ''ಧೈರ್ಯವಂತನಾದವನು ಕ್ಷತ್ರಿಯನು. ಅಹಿಂಸೆಯಲ್ಲಿ ನಿರತನಾದವನು ಮಹಾಪುರುಷನು. ಸಾಧು ಸಂತರ ಸೇವೆಯನ್ನು ಮಾಡುವವನು ಧೀಮಂತ ಪುರುಷನು, ದೇವರಿಗೆ ಪ್ರಿಯನಾದವನು ಪರೋಪಕಾರಿ'' ಎಂದು ಧರ್ಮಜನು ಯಕ್ಷನಿಗೆ ಹೇಳುತ್ತಾನೆ. | |
| 44. | ''ಪಶ್ಚಿಮ ಬಂಗಾಳ, ಒರಿಸ್ಸಾ, ಆಂಧ್ರಪ್ರದೇಶ, ಮಹಾರಾಷ್ಟ್ರ, ಗಂಗಾ ಯಮುನಾ ನದಿಗಳ ಪ್ರದೇಶ, ತಮಿಳುನಾಡು, ನರ್ಮದಾ ನದಿ ಪ್ರದೇಶ, ಕರ್ನಾಟಕ, ನಾಗಾಲ್ಯಾಂಡ್, ಗುಜರಾತ್, ಎತ್ತರವಾದ ದೇವದಾರು ವೃಕ್ಷಗಳಿರುವ ಹಿಮಾಲಯ, ಸಮುದ್ರದ ಅಲೆಗಳ ಲಯಕ್ಕೆ ತಲೆದೂಗುವ ಸಿರಿಮುಡಿಯ ತೆಂಗಿನ ಮರಗಳುಳ್ಳ ಕರಾವಳಿಯ ಕೇರಳ ರಾಜ್ಯಗಳು'' ಇವೆಲ್ಲವೂ ಭಾರತದ ವಿಭಿನ್ನ ಪ್ರದೇಶಗಳು ಎಂದು ಕವಿಗಳು ವರ್ಣಿಸುತ್ತಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 45. | ಭಾರತದ ಉತ್ತರ ಭಾಗದ ವ್ಯಾಸ ಮತ್ತು ವಾಲ್ಮೀಕಿ, ದಕ್ಷಿಣ ಭಾಗದ ಶಂಕರಾಚಾರ್ಯ, ಪಶ್ಚಿಮ ಭಾಗದ ಪಾಣಿನಿ, ಪೂರ್ವಭಾಗದ ರವೀಂದ್ರನಾಥ ಠಾಗೋರ್, ಉಜ್ಜಯಿನಿಯ ಕಾಳಿದಾಸ, ಮದ್ರಾಸಿನ ತಿರುವಳ್ಳುವರ್ ಇವರೆಲ್ಲರೂ ಭಾರತವೆಂಬ ಬೋಧಿ ವೃಕ್ಷದ ಕೊಂಬೆಗಳೆಂದು ಕವಿ ಸೇಡಿಯಾಪು ಕೃಷ್ಣ ಭಟ್ಟರು ಹೇಳಿದ್ದಾರೆ. | |
| 46. | ಅರ್ಜುನನು ಶಬರನಿಗೆ ''ಕಾಡಿನಲ್ಲಿ ವಾಸಿಸುವ ನಿರುಪದ್ರವಿಗಳಾದ ನರಿಗಳು, ಮೊಲಗಳು, ಜಿಂಕೆಗಳಲ್ಲಿ ನಿನ್ನ ಸಾಹಸವನ್ನೂ ತೋಳ್ಬಲವನ್ನೂ ತೋರಿಸುವುದು. ಅದನ್ನು ಬಿಟ್ಟು ಛಲದಂಕನಾದ ನನ್ನಲ್ಲಿ ನಿನ್ನ ಶೌರ್ಯವನ್ನು ಮೆರೆಯಲು ಬಂದರೆ ಅದು ಶೋಭಿಸಲಾರದು. ನಿನಗೇಕೆ ಸಾಹಸದ ಆಡಂಬರ ನನ್ನೊಡನೆ ಯುದ್ಧ ಮಾಡಬೇಕಾದರೆ ನನಗೆ ಸರಿ ಸಮನಾದ ನಿನ್ನ ಯಜಮಾನನಿದ್ದರೆ ಕರೆದುಕೊಂಡು ಬಾ'' ಎಂದು ಹೇಳಿದನು.<br><br>ಸಂದರ್ಭ ಮತ್ತು ಸ್ವಾರಸ್ಯವನ್ನು ಬರೆಯುವುದು. | $5 \times 3 = 15$ |
| 47. | ಪ್ರಸ್ತುತ ವಾಕ್ಯವನ್ನು ಶ್ರೀ ಸ್ವಾಮಿ ಜಗದಾತ್ಮಾನಂದ ಅವರು ರಚಿಸಿರುವ 'ಬದುಕಲು ಕಲಿಯಿರಿ' ಕೃತಿಯಿಂದ ಆಯ್ದ 'ಶಕ್ತಿಯೇ ಜೀವನ' ಎಂಬ ಗದ್ಯಪಾಠದಿಂದ ಆರಿಸಲಾಗಿದೆ.<br><br>ಸ್ವಾಮಿ ಜಗದಾತ್ಮಾನಂದರು ಶಕ್ತಿಯ ಮಹತ್ತ್ವವನ್ನು ತಿಳಿಸುವ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರ ಈ ಮಾತನ್ನು ಉದಾಹರಿಸುತ್ತಾರೆ.<br><br>ಶಾರೀರಿಕ, ಬೌದ್ಧಿಕ, ನೈತಿಕ, ಆಧ್ಯಾತ್ಮಿಕ ಶಕ್ತಿಗಳು ಒಂದುಗೂಡಿದಾಗ ಶಕ್ತಿಶಾಲಿ ವ್ಯಕ್ತಿತ್ವ ರೂಪುಗೊಳ್ಳುತ್ತದೆ ಎಂಬುದನ್ನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಹೇಳಲಾಗಿದೆ. | |
| 48. | ಪ್ರಸುತ್ತ ವಾಕ್ಯವನ್ನು ಶ್ರೀ ಕೆಂಪು ನಾರಾಯಣನು ರಚಿಸಿರುವ 'ಮುದ್ರಾಮಂಜೂಕ್ಷ' ಕೃತಿಯಿಂದ ಆಯ್ದ 'ಮಿತ್ರಪ್ರೇಮ' ಎಂಬ ಗದ್ಯಪಾಠದಿಂದ ಆರಿಸಲಾಗಿದೆ.<br><br>ಅಮಾತ್ಯ ರಾಕ್ಷಸನನ್ನು ತನ್ನೆಡೆಗೆ ಆಕರ್ಷಿಸಲು ಚಾಣಕ್ಯ. ಶಿಷ್ಯನಾದ ಪಶುಲೋಮನು ಆತ್ಮಹತ್ಯೆಯನ್ನು ಮಾಡಿಕೊಳ್ಳುವವನಂತೆ ನಟಿಸುತ್ತ ಇಂದ್ರಾದಿ ದೇವತೆಗಳನ್ನು ಕುರಿತು ಪ್ರಾರ್ಥಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.<br><br>ನಿರಪರಾಧಿಯಾದ ನಾನು ಆಪ್ತಮಿತ್ರನಿಗೆ ಬಂದ ಅಕಾಲ ಮರಣವನ್ನು ಸಹಿಸಲಾಗದೆ ಪ್ರಾಣತ್ಯಾಗವನ್ನು ಮಾಡುತ್ತಿರುವೆನು ಎಂಬುದನ್ನು ಈ ಮಾತಿನಲ್ಲಿ ಸ್ವಾರಸ್ಯ ಪೂರ್ಣವಾಗಿ ಹೇಳುತ್ತಾನೆ. | |
| 49. | ಪ್ರಸ್ತುತ ವಾಕ್ಯವನ್ನು ಶ್ರೀ ದುರ್ಗಸಿಂಹನು ರಚಿಸಿರುವ 'ಕರ್ನಾಟಕ ಪಂಚತಂತ್ರಂ' ಕೃತಿಯಿಂದ ಆಯ್ದ 'ಮೊಲಂ ಸಿಂಹಮಂ ಕೊಂದ ಕಥೆ' ಎಂಬ ಗದ್ಯಪಾಠದಿಂದ ಆರಿಸಲಾಗಿದೆ. ಭಯಂಕರವಾಗಿ ಕೋಪಗೊಂಡ ಸಿಂಹವು ಮೊಲದ ಮಾತಿನ ಮರ್ಮವನ್ನು ಅರಿಯದೆ ಬಾವಿಯಲ್ಲಿ ಕಂಡ ತನ್ನ ಪ್ರತಿಬಿಂಬವನ್ನು ಇನ್ನೊಂದು ಸಿಂಹವೆಂದು ಭಾವಿಸಿ ಬಾವಿಗೆ ಬಿದ್ದು ಪ್ರಾಣ ಕಳೆದುಕೊಂಡ ಸಂದರ್ಭದಲ್ಲಿ ಕವಿಯು ಈ ಮಾತನ್ನು ಹೇಳುತ್ತಾನೆ. 'ಎಷ್ಟೇ ಶೌರ್ಯವಂತನಾದರೂ ಕೋಪದಿಂದ ಅವಸರಪಡುವವನು ಬದುಕಲಾರನು' ಎಂಬುದನ್ನು ಈ ಮಾತಿನಲ್ಲಿ ಸ್ವಾರಸ್ಯ ಪೂರ್ಣವಾಗಿ ಹೇಳಲಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 50. | ಪ್ರಸ್ತುತ ವಾಕ್ಯವನ್ನು ಶ್ರೀ ದೇ. ಜವರೇಗೌಡ ಅವರು ಸಂಪಾದಿಸಿರುವ 'ಜನಪದ ಗೀತಾಂಜಲಿ' ಕೃತಿಯಿಂದ ಆಯ್ದ 'ರಸಬಳ್ಳಿ' ಎಂಬ ಪದ್ಯಭಾಗದಿಂದ ಆರಿಸಲಾಗಿದೆ. ತಾಯಿಯು ತನ್ನ ಮಗುವಿನ ರೂಪಲಾವಣ್ಯವನ್ನು ಬಾಯ್ತುಂಬ ಹಾಡಿ ಹೊಗಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.<br><br>ತಾಯಿಯು ತನ್ನ ಮಗುವಿನ ಬಗೆಗಿರುವ ಪ್ರೀತಿ ವಾತ್ಸಲ್ಯವನ್ನು ಈ ಮಾತಿನಲ್ಲಿ ಸ್ವಾರಸ್ಯ ಪೂರ್ಣವಾಗಿ ವ್ಯಕ್ತಪಡಿಸುತ್ತಾಳೆ. | |
| 51. | ಪ್ರಸ್ತುತ ವಾಕ್ಯವನ್ನು ಮಹಾಕವಿ ರನ್ನನು ರಚಿಸಿರುವ 'ಸಾಹಸ ಭೀಮ ವಿಜಯಂ' ಕೃತಿಯಿಂದ ಆಯ್ದು 'ಕಾಲಾಗ್ನಿ ರುದ್ರಂ ಪೊರಮಡುವವೊಲ್' ಎಂಬ ಪದ್ಯ ಭಾಗದಿಂದ ಆರಿಸಲಾಗಿದೆ.<br><br>ಭೀಮನು ಸಿಂಹಗರ್ಜನೆಯಂತಿರುವ ಕಟುವಾದ ಮಾತುಗಳನ್ನು ಆಡಿದ ಸಂದರ್ಭದಲ್ಲಿ ಕವಿಯು ಈ ಮಾತನ್ನು ಹೇಳುತ್ತಾನೆ. ಸಿಂಹಗರ್ಜನೆಯಂತಹ ಭೀಮನ ಮಾತುಗಳನ್ನು ಕೇಳಿ ಅಭಿಮಾನಧನನಾದ ದುರ್ಯೋಧನನು ಕೋಪದಿಂದ ಕೆಂಪಾದ ಕಣ್ಣುಗಳನ್ನು ಬಿಡುತ್ತ, ಸರೋವರದ ತಣ್ಣನೆಯ ನೀರಿನಲ್ಲಿ ಅಡಗಿ ಕುಳಿತಿದ್ದರೂ ಮೈಯೆಲ್ಲ ಬೆವರಿತು ಎಂದು ಕೋಪದ ತೀವ್ರತೆಯನ್ನು ಸ್ವಾರಸ್ಯ ಪೂರ್ಣವಾಗಿ ಕವಿ ವರ್ಣಿಸುತ್ತಾನೆ. | |
| | ಲೇಖಕ, ಕವಿಗಳ ಸ್ಥಳ, ಕಾಲ, ಕೃತಿಗಳನ್ನು ಬರೆಯುವುದು : | $2 \times 3 = 6$ |
| | ಕಾಲ ಮತ್ತು ಸ್ಥಳಕ್ಕೆ | 1 ಅಂಕ |
| | ಕೃತಿಗೆ | 1 ಅಂಕ |
| | ವಾಕ್ಯರೂಪದ ವಿವರಣೆ ಭಾಷೆ, ಶೈಲಿಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 52. | ಪ್ರಭುಶಂಕರ :<br><br>ಶ್ರೀ ಪ್ರಭುಶಂಕರ ಅವರು ಕ್ರಿ.ಶ. 1929 ರಲ್ಲಿ ಚಾಮರಾಜ ನಗರದಲ್ಲಿ ಜನಿಸಿದರು. ಇವರು ಬುದ್ಧ ನಾಟಕ ಚಕ್ರ, ಕನ್ನಡದಲ್ಲಿ ಭಾವಗೀತೆ, ಆಮ್ರಪಾಲಿ, ಅಂಗುಲೀಮಾಲ, ಸುಜಾತ, ಗಾಳಿಯೆಂಬ ಕುದುರೆ ಏರಿ, ಅಮೇರಿಕಾದಲ್ಲಿ ನಾನು ಮತ್ತು ಶಾಂತಿ, ತತ್ತ್ವಶಾಸ್ತ್ರದ ರೂಪರೇಷೆಗಳು, ಬೆರಗು, ಜನಮನ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. | |
| 53. | ಪಂಪ :<br><br>ಆದಿ ಮಹಾಕವಿ ಪಂಪನು ಕ್ರಿ.ಶ. 914 ರಲ್ಲಿ ವೆಂಗಿ ಮಂಡಲ ವೆಂಗಿಪಳು ಅಗ್ರಹಾರದಲ್ಲಿ ಜೀವಿಸಿದ್ದನು. ಇವನು 'ಆದಿಪುರಾಣ' ಮತ್ತು 'ವಿಕ್ರಮಾರ್ಜುನ ವಿಜಯಂ' ಎಂಬ ಕೃತಿಗಳನ್ನು ರಚಿಸಿದ್ದಾನೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 54. | ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯುವುದು. | 1 × 3 = 3 |
| | ಪ್ರಸ್ತಾರ | 1 ಅಂಕ |
| | ಗಣ ವಿಭಾಗ | 1 ಅಂಕ |
| | ಛಂದಸ್ಸಿನ ಹೆಸರು | 1 ಅಂಕ |
| | ಒಟ್ಟು | 3 ಅಂಕಗಳು |

| ಭ | ರ | ನ | ಭ | ಭ | ರ | ಲ. ಗು. |
|---|---|---|---|---|---|---|
| — U U | — U — | U U U | — U U | — U U | — U — | U — |
| ಎಂದವ | ನುಕ್ತಿಯಂ | ಗಿರಿಶ | ನಾಲಿಸಿ | ತಾಪಸ | ಲೇಸನಾ | ಡಿದಯ್ |

ಈ ಪದ್ಯವು ಅಕ್ಷರಗಣದ 'ಉತ್ಪಲಾಮಾಲಾ ವೃತ್ತ'ದಲ್ಲಿ ರಚಿತವಾಗಿದೆ.

| | | |
|---|---|---|
| 55. | ನಿನ್ನ ಕರುಣೆ ಕಡೆಗೋಲಿಟ್ಟು ಮಥಿಸುತಿಹೆ ಏಕೆ ? | 1 × 3 = 3 |
| | ಅಲಂಕಾರದ ಹೆಸರು | 1 ಅಂಕ |
| | ಲಕ್ಷಣ ಬರೆದು ಸಮನ್ವಯ | 2 ಅಂಕಗಳು |
| | ಒಟ್ಟು | 3 ಅಂಕಗಳು |

ಉಪಮೇಯ : ಕರುಣೆ

ಉಪಮಾನ : ಕಡೆಗೋಲು

ಸಮನ್ವಯ : ಇಲ್ಲಿ ಉಪಮೇಯವಾದ ಕರುಣೆಗೂ ಉಪಮಾನವಾದ ಕಡೆಗೋಲಿ ಯಾವುದೇ ಭೇದವು ಕಂಡುಬರದೆ ಅವೆರಡೂ ಒಂದೇ ಎಂದು ವರ್ಣಿಸಲಾಗಿದೆ.

ಅಲಂಕಾರದ ಲಕ್ಷಣ : ರೂಪಕಾಲಂಕಾರ

| | | |
|---|---|---|
| 56. | ಗಾದೆ ಮಾತುಗಳನ್ನು ವಿಸ್ತರಿಸಿ ಬರೆಯುವುದು. | 1 × 3 = 3 |
| | ಗಾದೆಯ ಮಹತ್ತ್ವ | 1 ಅಂಕ |
| | ಗಾದೆಯ ಅರ್ಥ ವಿವರಣೆ | 1 ಅಂಕಗಳು |
| | ಭಾಷಾ ಶೈಲಿ, ಉದಾಹರಣೆ | 1 ಅಂಕಗಳು |
| | ಒಟ್ಟು | 3 ಅಂಕಗಳು |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 57. | ಪದ್ಯ ಭಾಗ ಪೂರ್ಣ ಮಾಡಿ :<br><br>ನುಡಿಯಲು ಬಾರದು ಕೆಟ್ಟನುಡಿಗಳ<br>ನುಡಿಯಲು ಬಾರದು ಕೆಟ್ಟನಡೆಗಳ<br>ನುಡಿದಡೇನು ನುಡಿಯದಿರ್ದಡೇನು ?<br>ಹಿಡಿದ ವ್ರತ ಬಿಡದಿರಲು, ಅದೇ ಮಹಾಜ್ಞಾನದಾಚರಣೆ<br>ಎಂಬೆನು ಅಜಗಣ್ಣ ತಂದೆ.<br><br>ಅಥವಾ<br><br>ಹಲ್ಲಣವಿಲ್ಲದೆ ಕುದುರೆ ಹತ್ತಿ ಓಡಿಸಿದಂತೆ<br>ಬೆಲ್ಲ ಹಾಕದ ಪರಮಾನ್ನದಂತೆ<br>ಇಲ್ಲದೆ ಹುಟ್ಟು ಹರಿಗೋಲನೇರಿದಂತೆ<br>ಸೊಲ್ಲಿಗೆ ಬುಡದಲ್ಲಿ ಅಳಿದಂತೆ ಸಾಧನ<br>ಎಲ್ಲ ಸಾಧನೆಗಳ ಮಾಡಲೇನು. | 1 × 4 = 4 |
| 58. | ಪದ್ಯಭಾಗದ ಸಾರಾಂಶವನ್ನು ಬರೆಯುವುದು. | 1 × 4 = 4 |
| | ಸಾರಾಂಶದ ವಿವರಣೆಗೆ | 3 ಅಂಕ |
| | ಭಾಷಾ ಶೈಲಿಗೆ | 1 ಅಂಕಗಳು |
| | ಒಟ್ಟು | 4 ಅಂಕಗಳು |
| | ಗಂಡನ ಸೂಚನೆಯನ್ನು ಅರಿತು ನಡೆಯದಂಥ ಹೆಂಡತಿ ಇದ್ದರೆ ಏನು ಪ್ರಯೋಜನ. ಭಿನ್ನತೆಯನ್ನು ಅರಿತು ನಡೆಯದಂಥ ಗೆಳೆತನದಿಂದ ಏನು ಪ್ರಯೋಜನ ಹಿಂದಿನ ಜನ್ಮದಲ್ಲಿ ದಾನಧರ್ಮ ಮಾಡಿಲ್ಲವಾದ್ದರಿಂದ. ಈ ಜನ್ಮದಲ್ಲಿ ಸುಖವನ್ನು ಬಯಸಿದರೆ ಏನು ಪ್ರಯೋಜನ ಕಾಗಿನೆಲೆಯ ಚೆನ್ನ ಆದಿಕೇಶವನೆಂಬ ದೇವರು ಇರುವಾಗ ಅನ್ಯ ದೇವರನ್ನು ನೆನೆಯುವುದರಿಂದ ಏನು ಪ್ರಯೋಜನ ಎಂದು ಕನಕದಾಸರು ಅಭಿಪ್ರಾಯಪಡುತ್ತಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 59. ಮತ್ತು 60. | ಎಂಟು ಅಥವಾ ಹತ್ತು ವಾಕ್ಯಗಳ ಗದ್ಯದ ಪ್ರಶ್ನೆಗಳಿಗೆ. | 2 × 4 = 8 |
| | — *ವಿಧಾನಸೌಧ ನಿರ್ಮಾಣದ ಹಿನ್ನೆಲೆಯ ಸಂಕ್ಷಿಪ್ತ ವಿವರ.* | |
| | ಕ್ರಿ.ಶ. 1952 ರಲ್ಲಿ ಅಧಿಕಾರಕ್ಕೆ ಬಂದ ಕೆಂಗಲ್ ಹನುಮಂತಯ್ಯನವರ ನೇತೃತ್ವದ ಸರ್ಕಾರ ಶಾಸನ ಸಭೆಯ ಉಭಯ ಸದನಗಳೂ ವಿವಿಧ ಇಲಾಖೆಗಳ ಸಚಿವಾಲಯಗಳು ಒಂದೇ ಕಟ್ಟಡದಲ್ಲಿ ಇರುವುದು. ಸೂಕ್ತವೆಂದು ಭಾವಿಸಿ, ಮೈಸೂರು ಸರ್ಕಾರದ ಅಂದಿನ ಆದಾಯ ವೆಚ್ಚಗಳನ್ನು ಗಮನದಲ್ಲಿಟ್ಟುಕೊಂಡು ಸುಮಾರು 50 ಲಕ್ಷ ರೂಪಾಯಿಯ ವೆಚ್ಚದಲ್ಲಿ ಒಂದು ಕಟ್ಟಡವನ್ನು ನಿರ್ಮಿಸಬೇಕೆಂದು ಕೈಗೊಂಡು ತಜ್ಞರನ್ನೊಳಗೊಂಡ ಒಂದು ಸಮಿತಿಯನ್ನು ನೇಮಕ ಮಾಡಲಾಯಿತು. ಖರ್ಚನ್ನು ಕಡಿಮೆ ಮಾಡುವ ದೃಷ್ಟಿಯಿಂದ ಕಟ್ಟಡದ ನಿರ್ಮಾಣ ಕಾರ್ಯವನ್ನು ಕಂಟ್ರಾಕ್ಟರುಗಳಿಗೆ ವಹಿಸದೆ, ಲೋಕೋಪಯೋಗಿ ಇಲಾಖೆಯಿಂದಲೇ ನಿರ್ವಹಿಸತಕ್ಕದೆಂದು ತೀರ್ಮಾನವಾಯಿತು. ಕಟ್ಟಡ ನಿರ್ಮಾಣದ ಮೇಲ್ವಿಚಾರಣೆಗೆ ಮುನಿಯಪ್ಪ ಅವರನ್ನು ಎಕ್ಸಿಕ್ಯೂಟಿವ್ ಇಂಜಿನಿಯರ್ ಆಗಿ ಹಾಗೂ ಕಟ್ಟಡದ ವಿನ್ಯಾಸವನ್ನು ನಿಗದಿ ಮಾಡುವ ಕಾರ್ಯದಲ್ಲಿ ಸಲಹೆ ನೀಡಲು ವಾಸ್ತುಶಿಲ್ಪಿ ಮಾಣಿಕ್ಯಂ ಅವರನ್ನು ನೇಮಕ ಮಾಡಲಾಯಿತು. ಕರ್ನಾಟಕದ ಸಂಸ್ಕೃತಿ ಹಾಗೂ ದಕ್ಷಿಣ ಭಾರತದ ವಾಸ್ತುಶಿಲ್ಪಕಲೆಯ ಹಿರಿಮೆಯನ್ನು ಪ್ರತಿಬಿಂಬಿಸುವ ಜಗತ್ಪ್ರಸಿದ್ಧ ಸೌಧವನ್ನು ನಿರ್ಮಿಸುವುದು ಕೆಂಗಲ್ ಹನುಮಂತಯ್ಯ ಅವರ ಗುರಿಯಾಗಿತ್ತು. ಕ್ರಿ.ಶ. 1956 ರ ಅಕ್ಟೋಬರ್ ತಿಂಗಳ ವಿಜಯ ದಶಮಿಯ ದಿನದಂದು ನಡೆದ ಸರಳ ಸಮಾರಂಭದಲ್ಲಿ ವಿಧಾನಸೌಧದ ಆರಂಭೋತ್ಸವ ಕಾರ್ಯ ಜರುಗಿತು. | |
| | — *ಗುರುಬಚ್ಚನ್ ಸಿಂಗ್‌ನ ಸಾಹಸ ಕುರಿತು.* | |
| | ಸ್ವಾತಂತ್ರ್ಯಾನಂತರ ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರವಾಗಿ ಭಾರತ ಕೂಡ ಸಹಿ ಹಾಕಿದ್ದರ ಪರಿಣಾಮ ಹಲವಾರು ಶಾಂತಿಪಾಲನಾ ಕಾರ್ಯಾಚರಣೆಗಳಲ್ಲಿ ಭಾಗವಹಿಸಬೇಕಾಗಿ ಬಂತು. ಕೊರಿಯಾ, ಸೈಪ್ರಸ್, ಕಾಂಗೋ, ಜೈರ್, ಉಗಾಂಡಾ – ಹೀಗೆ ಹಲವು ರಾಷ್ಟ್ರಗಳಲ್ಲಿ ಭಾರತೀಯ ಸೈನಿಕರು ವಿಶ್ವಸಂಸ್ಥೆಯ ಭಾಗವಾಗಿ ಕೆಲಸ ಮಾಡಿದರು. 1961 ರ ಡಿಸೆಂಬರ್ ಕಾಂಗೋ ಕಾರ್ಯಾಚರಣೆಯಲ್ಲಿ ಗೂರ್ಖಾ ರೈಫಲ್ಸ್‌ನ ಕ್ಯಾಪ್ಟನ್ ಗುರುಬಚ್ಚನ್ ಸಲಾರಿಯಾ ಕಟಾಂಗದ ಎಲಿಜಬೆತ್ ವಿಲ್ಲೆಯಲ್ಲಿ ಕೇವಲ ಬಯೊನೆಟ್, ಕುಕ್ರಿ ಮತ್ತು ಗ್ರೆನೇಡ್‌ಗಳನ್ನು ಬಳಸಿ 40 ವೈರಿ ಸೈನಿಕರನ್ನು ಹಾಗೂ ಅವರ ಎರಡು ವಾಹನಗಳನ್ನು ನಾಶಮಾಡಿ, ವಿಶ್ವಸಂಸ್ಥೆಯ ಕಚೇರಿಗೆ ಬಂದಿದ್ದ ಅಪಾಯವನ್ನು ತಮ್ಮ ಪ್ರಾಣಾರ್ಪಣೆ ಮಾಡಿ ತಡೆದರು. ಈ ಮೂಲಕ ಭಾರತೀಯ ಯೋಧರ ಕರ್ತವ್ಯ ನಿಷ್ಠೆಯನ್ನು ಜಗತ್ತಿಗೆ ಸಾರಿ, ವಿದೇಶಿ ನೆಲದಲ್ಲಿ ಮರಣೋತ್ತರ ಪರಮ ವೀರಚಕ್ರ ಪ್ರಶಸ್ತಿಗಳಿಸಿದ ಮೊದಲಿಗರಾದರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | — *ಕನ್ನಡ ಭಾಷೆ ಸಮೃದ್ಧವಾಗಿ ರೂಪುಗೊಂಡ ಬಗೆ ಹೇಗೆ ?*<br><br>ಕನ್ನಡ ಭಾಷೆಗೆ ಸುಮಾರು 2000 ವರ್ಷಗಳ ಸಮೃದ್ಧ ಇತಿಹಾಸವಿದೆ. ಕನ್ನಡಕ್ಕೆ ಪ್ರಾಚೀನ ಕಾಲದಿಂದಲೂ ಸಂಸ್ಕೃತದ ಪೋಷಣೆ ದೊರೆಯುತ್ತ ಬಂದಿದೆ. ವೈದಿಕ ಮತ್ತು ಜೈನ ಧಾರ್ಮಿಕ ತತ್ತ್ವಗಳನ್ನು ಕನ್ನಡದಲ್ಲಿ ವಿವರಿಸಲು ಅನೇಕ ಪಾಂಡಿತ್ಯ ಪೂರ್ಣ ಕವಿಗಳು ಹಲವು ಕಾವ್ಯಗಳನ್ನು ರಚಿಸಿದ್ದಾರೆ. ವಚನಕಾರರು ಹಾಗೂ ಕೀರ್ತನಕಾರರೂ ಸುಲಭ ಮಾರ್ಗವನ್ನು ತೋರಿಸಿ ಕೊಟ್ಟಿದ್ದಾರೆ. ಒಂದು ಜೀವಂತ ಭಾಷೆ ಅನ್ಯ ಭಾಷೆಗಳಿಂದ ಕೊಳು ಕೊಡುಗೆ ವ್ಯವಹಾರ ಇಟ್ಟುಕೊಂಡಿರುತ್ತದೆ. ಕನ್ನಡವು ಹಿಂದೆ ಸಂಸ್ಕೃತ, ಪ್ರಾಕೃತ ಭಾಷೆಗಳಿಂದ ಅನೇಕ ಶಬ್ದಗಳನ್ನು ತನ್ನಲ್ಲಿ ಅಳವಡಿಸಿಕೊಂಡು ಶ್ರೀಮಂತವಾಗಿದೆ. ಮಹಮದೀಯರ ಕಾಲದಲ್ಲಿ ಪರ್ಷಿಯನ್ ಭಾಷೆಯಿಂದಲೂ ಯುರೋಪಿಯನ್ನರ ಆಗಮನದಿಂದ ಇಂಗ್ಲೀಷನ್ನು ಅಸಂಖ್ಯಾತ ಪದಗಳು, ಇದಲ್ಲದೆ ಉರ್ದು, ಪೋರ್ಚುಗೀಸ್ ಪದಗಳು ಕನ್ನಡ ನುಡಿ ಬೊಕ್ಕಸಕ್ಕೆಕ ಸೇರಿಕೊಂಡಿದೆ. ಗಡಿ ಪ್ರದೇಶಗಳಲ್ಲಿ ತಮಿಳು, ತೆಲುಗು, ಮರಾಠಿ, ಮಲೆಯಾಳಂ ಭಾಷೆಗಳ ಪದಗಳು ಪರಸ್ಪರ ಎರವಲು ಪಡೆದು ಅಭಿವೃದ್ಧಿ ಹೊಂದುತ್ತಲಿದೆ. ಸ್ವಂತ ಭಾಷೆಯ ಪದಗಳೂ ನುಡಿಗಟ್ಟುಗಳಾಗಿ ಬಳಸಲ್ಪಡುವುದರಿಂದ ಕನ್ನಡ ಭಾಷೆ ಸಮೃದ್ಧವಾಗಿ ರೂಪುಗೊಂಡಿದೆ. | |
| 61. | ಎಂಟು ಅಥವಾ ಹತ್ತು ವಾಕ್ಯಗಳ ಪದ್ಯದ ಪ್ರಶ್ನೆಗಳಿಗೆ ಉತ್ತರಗಳು. | $1 \times 4 = 4$ |
| | ವಿಷಯ ಸಂಗ್ರಹಕ್ಕೆ | 3 ಅಂಕಗಳು |
| | ಭಾಷಾ ಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| | — ಭಾರತ ಮಾತೆಯ ವೈಭವ ವೈಶಿಷ್ಟ್ಯವನ್ನು ಕವಿ ಅತ್ಯಂತ ಮನೋಜ್ಞವಾಗಿ ವರ್ಣಿಸಿದ್ದಾರೆ. ಭಾರತಮಾತೆಯ ಭವ್ಯವಾದ ಕೀರ್ತಿಗೆ ಕರ್ನಾಟಕ ಮಾತೆಯ ಮಕ್ಕಳು ತಮ್ಮ ಕೊಡುಗೆಯ ಮೂಲಕ ದಿವ್ಯವಾದ ಆರತಿಯನ್ನು ಬೆಳಗುತ್ತಿದ್ದಾರೆ. ಭಾರತ ಮಾತೆಗೂ ಹಾಗೂ ಕರ್ನಾಟಕ ಮಾತೆಗೂ ಜಯವಾಗಲಿ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಭಾರತ ಭೂಮಿಯು ಶ್ರೀಗಂಧ ಕುಸುಮಗಳಿಂದ ಕೂಡಿದ ಹಿಮಾಲಯ ಪರ್ವತದಿಂದಲೂ, ಉತ್ತರಾದಿ, ದಕ್ಷಿಣಾದಿ ಹಾಗೂ ಜನಪದ ಸಂಗೀತ ಪರಂಪರೆಯಿಂದಲೂ, ಮಾವುಬೇವು ಫಲಗಳುಳ್ಳ ವೃಕ್ಷ ಸಂಪತ್ತಿನಿಂದಲೂ, ಪ್ರಾಣಿ ಪಕ್ಷಿ ಸಂಕುಲದ ಸಮೃದ್ಧತೆಯಿಂದಲೂ ಕೂಡಿದೆ. ಭಾರತದಲ್ಲಿ ಸಿಂಹಗರ್ಜನೆಯಂತಿರುವ ಮಹಾಭಾರತ, ಸಾತ್ವಿಕ ಕೋಕಿಲ ಧ್ವನಿಯಂತಿರುವ ರಾಮಾಯಣ, ಇತಿಹಾಸ ಸಾರುವ ಶಾಸನಗಳಿವೆ. ಗಂಗೆ ತುಂಗೆಯರು ಭಾರತ ಮಾತೆಯ ಪಾದ ಹಾಗೂ ಮುಡಿಗಳನ್ನು ತೊಳೆಯುತ್ತಿದ್ದಾರೆ.<br><br>ಭಾರತದಲ್ಲಿ ವೈವಿಧ್ಯಮಯ ಸಂಸ್ಕೃತಿಯಿದ್ದರೂ ಮುಡಿಕಟ್ಟಿದಂತೆ ಏಕತಾ ಮನೋಭಾವನೆಯೂ ಕಂಡುಬರುತ್ತದೆ. ವೇದ, ಕುರಾನ್, ಬೈಬಲ್ ಧರ್ಮಗ್ರಂಥಗಳ ಆಧಾರಿತ ತತ್ತ್ವಗಳಿಗೆ ಆಶ್ರಯ ನೀಡುವ ಮೂಲಕ ಭಾರತಮಾತೆಯು ವಿಶ್ವಬಂಧುವೆನಿಸಿದ್ದಾಳೆ. ಜನ್ಮಭೂಮಿಯು ಸ್ವರ್ಗಕ್ಕೂ ಮಿಗಿಲಾದುದು, ಮಾತೃಭಾಷೆಯು ಅಮೃತಕ್ಕೂ ಮಿಗಿಲಾದುದು. ಜನ್ಮಭೂಮಿ ಹಾಗೂ ಮಾತೃಭಾಷೆಯ ಸಂಬಂಧ ಕರುಳಬಳ್ಳಿಯ ಸಂಬಂಧದಂತೆ, ರಕ್ತ ಸಂಬಂಧಕ್ಕಿಂತಲೂ ಮಿಗಿಲಾದುದು ಎಂದು ಅರವಿಂದ ಮಾಲಗತ್ತಿ ಅವರು ವರ್ಣಿಸಿದ್ದಾರೆ.<br><br>— ಕಾವ್ಯದ ಪ್ರಾಚೀನ ಭಾಗ ಶಾಸನ ಸಂಸ್ಕೃತಿ. ರಾಜರು, ನಾಯಕರು ತಮ್ಮ ಸಾಧನೆಯನ್ನು ದಾಖಲಿಸುವ ಮಾಧ್ಯಮವಾಗಿ ಶಾಸನ ರಚನೆಗೆ ಮುಂದಾದರು. ಅದು ಇತಿಹಾಸ ಹಾಗೂ ಸಾಹಿತ್ಯದ ಆಕರವಾಗಿ ನಾಡಿನ ವೈಭವ ಸಂಸ್ಕೃತಿಯನ್ನು ಪ್ರತಿನಿಧಿಸಿದೆ.<br><br>ದೇಶೀ ಛಂದಸ್ಸಿನ ತ್ರಿಪದಿಯಲ್ಲಿ ರಚಿತವಾಗಿರುವ ಕಪ್ಪೆ ಅರಭಟ್ಟನ ಶಾಸನದಲ್ಲಿ ಕನ್ನಡಿಗರ ಸ್ವಭಾವ ಗೌರವವನ್ನು ಸುಂದರವಾಗಿ ಚಿತ್ರಿಸಲಾಗಿದೆ. ಕನ್ನಡಿಗನದ ಮಾಧವನು ಒಳ್ಳೆಯವರಿಗೆ ಒಳ್ಳೆಯವನು, ಮಧುರವಾಗಿ ಮಾತನಾಡುವವರೊಡನೆ ಮಧುರವಾಗಿ ಮಾತನಾಡುವವರು ತೊಂದರೆಯನ್ನು ಕೊಡುವ ಶತ್ರುವೀರರ ಪಾಲಿಗೆ ಮಹಾವೀರನು. ಈತನು ಬೇರೆ ಯಾರೂ ಅಲ್ಲ ಸಾಕ್ಷಾತ್ ಶ್ರೀಕೃಷ್ಣನು ಎಂದು ವರ್ಣಿಸಲಾಗಿದೆ.<br><br>ಲಕ್ಷ್ಮೀಧರಾಮಾತ್ಯನ ಶಾಸನದಲ್ಲಿ ಕನ್ನಡಿಗರ ಉದಾತ್ತ ಸಂಸ್ಕೃತಿಯ ಬೀಜಮಂತ್ರಗಳು ಇಲ್ಲಿವೆ. ಕನ್ನಡನಾಡಿನ ತಾಯಿಯೊಬ್ಬಳು ಹಾಲುಣಿಸುವಾಗ ತನ್ನ ಮಗುವಿನ ಕಿವಿಯಲ್ಲಿ ''ಕೆರೆಯನ್ನು ಕಟ್ಟಿಸು, ಬಾವಿಯನ್ನು ತೆಗೆಯಿಸು, ದೇವಾಲಯವನ್ನು ನಿರ್ಮಿಸು, ಸೆರೆಯಲ್ಲಿ ಸಿಲುಕಿದ ಅನಾಥರನ್ನು ಬಿಡಿಸು, ಗೆಳೆಯರಿಗೆ ಒಳ್ಳೆಯದನ್ನು ಮಾಡು, ನಂಬಿದವರಿಗೆ ಆಶ್ರಯದಾತನಾಗಿರು, ಶಿಷ್ಯರನ್ನು ಕಾಪಾಡು'' ಎಂದು ಲೋಕೋತ್ತರ ಕಾರ್ಯಗಳನ್ನು ಬಿತ್ತುತ್ತಿದ್ದಳು ಎಂದು ವರ್ಣಿಸಲಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 62. | ಪತ್ರಲೇಖನ ಬರೆಯುವುದು : | 1 × 5 = 5 |
| | ಇಂದ, ಗೆ – ವಿಳಾಸ<br>ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸ್ಥಳ, ದಿನಾಂಕ<br>ಸಹಿಯೊಂದಿಗೆ ಮುಕ್ತಾಯ | 1 ಅಂಕ |
| | ಭಾಷಾ ಶೈಲಿಗೆ | 1 ಅಂಕ |
| | ಒಟ್ಟು | 5 ಅಂಕಗಳು |
| 63. | ಪ್ರಬಂಧ ಲೇಖನ ಬರೆಯುವುದು : | 1 × 5 = 5 |
| | ಪ್ರಸ್ತಾವನೆ / ಪೀಠಿಕೆ | 1 ಅಂಕ |
| | ವಿಷಯದ ಬೆಳವಣಿಗೆ | 2 ಅಂಕಗಳು |
| | ಉಪಸಂಹಾರ / ಮುಕ್ತಾಯ | 1 ಅಂಕ |
| | ಭಾಷಾ ಶೈಲಿಗೆ | 1 ಅಂಕ |
| | ಒಟ್ಟು | 5 ಅಂಕಗಳು |